BS **ಪ್ರಥಮ ಪಿ.ಯು.ಸಿ. ವಾರ್ಷಿಕ ಪರೀಕ್ಷೆ - 2016** I

# ಕನ್ನಡ - 01

ಸಮಯ : 3.15 ಗಂಟೆ | ಗರಿಷ್ಠ ಅಂಕಗಳು : 100

## ಅ - ವಿಭಾಗ

I ಒಂದು ಪೂರ್ಣವಾಕ್ಯದಲ್ಲಿ ಉತ್ತರಿಸಿರಿ. 1x10=10

1. ಪಿನಾಕಪಾಣಿ ಎಂದು ಯಾರನ್ನು ಕರೆಯಲಾಗಿದೆ?
2. ಅರಗಿಳಿಗೆ ಯಾವ ಬಣ್ಣವನ್ನು ಬರೆಯಲಾಗಿದೆ?
3. ಹುಟ್ಟಿನೊಂದಿಗೆ ಅಂಟಿ ಬಂದ ಯಾವುದನ್ನು ಕಳೆಯಬೇಕು?
4. ಜೋಗಸೆಯಲ್ಲಿ ಯಾರನ್ನು ಬಂಧಿಸಲು ಕವಿಯು ಬಯಸುತ್ತಾನೆ?
5. ಬಡ ಮಕ್ಕಳ ಪಾಲಿಗೆ ಚಾಕಲೇಟು ಯಾವುದು?
6. ಬುದ್ಧನಿಗೆ ಜ್ಞಾನೋದಯವಾದ ದಿನ ಯಾವುದು?
7. ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು?
8. ಬೋಳೇಶಂಕರನ ಊರು ಯಾವುದು?
9. ಪಿಶಾಚಿಗಳು ಯಾರ ಹೆಸರನ್ನು ಕೇಳಿದರೆ ಹೆದರುತ್ತವೆ?
10. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

## ಆ - ವಿಭಾಗ

II ಅ. ನಾಲ್ಕು ಪ್ರಶ್ನೆಗಳಿಗೆ **2-3** ವಾಕ್ಯಗಳಲ್ಲಿ ಉತ್ತರಿಸಿರಿ. 2x4=8

11. ಕಾವೇರಿ ನದಿಯ ಮಹಿಮೆ ಎಂತಹದು?
12. ಶಿಶು ಮಕ್ಕಳು ಬಾಯಿ ಬಾಯಿ ಏಕೆ ಬಡಿದುಕೊಳ್ಳುತ್ತಾರೆ?
13. ಮಗುವು ಬದುಕಿನಲ್ಲಿ ಯಾವ ಯಾವ ತೊಂದರೆಗಳಿಗೆ ಒಳಗಾಗಬಾರದು?
14. ತನ್ನನ್ನು ಏಕೆ ಕಿತ್ತುಕೊಳ್ಳಬಾರದೆಂದು ಹೊಟ್ಟೆಯೊಳಗಿನ ಮಗುವು ಹೇಳುತ್ತದೆ?
15. ಅಮ್ಮಿಯ ಪಾಲಿಗೆ ನಮಾಜ್ ಮತ್ತು ಈದ್ ಎಂದರೆ ಯಾವುದು?

ಆ. ಮೂರು ಪ್ರಶ್ನೆಗಳಿಗೆ **2-3** ವಾಕ್ಯಗಳಲ್ಲಿ ಉತ್ತರಿಸಿರಿ. 2x3=6

16. ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ?
17. ಶಾಸ್ತ್ರಿ ಮಾಸ್ತರರ ಮಕ್ಕಳ ಶವಯಾತ್ರೆಗೆ ಜನ ಹೇಗೆ ಬಂದಿತ್ತು?
18. ಸಾಲ ಕೇಳಲು ಹೋದ ಬಡ ರಾಷ್ಟ್ರಗಳ ಮೇಲೆ ವಿಧಿಸಿದ ನಿರ್ಬಂಧಗಳು ಯಾವುವು?
19. ಕಾಡಿನಲ್ಲಿ ಹುಲಿಗಳೆಲ್ಲಾ ದಿಕ್ಕಾಪಾಲಾಗಿ ಏಕೆ ಓಡಿದವು?

ಇ. ಮೂರು ಪ್ರಶ್ನೆಗಳಿಗೆ **2-3** ವಾಕ್ಯಗಳಲ್ಲಿ ಉತ್ತರಿಸಿರಿ. 2x3=6

20. ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ತಿಯನ್ನು ಹೇಗೆ ಹಂಚಿದನು?
21. ಬೋಳೇಶಂಕರನು ಹುಡುಗಿಯರಿಗೆ ಚಿನ್ನ ಕೊಟ್ಟಿದ್ದಕ್ಕೆ ಸಾವ್ಕಾರಣ್ಣನು ಏನು ಹೇಳುತ್ತಾನೆ?
22. ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?
23. ಬೋಳೇಶಂಕರ ಏನೆಂದು ಡಂಗೂರ ಸಾರುತ್ತಾನೆ?

## ಇ- ವಿಭಾಗ

III ಅ. ಎರಡನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿರಿ. 3x2=6

24. ಕರಕ್ಕೆ ಶೃಂಗಾರ ಸತ್ಪಾತ್ರಕ್ಕೀವುದು....
25. ಸಲಹಿಕೊಂಬುದು ತನ್ನ ಮಾತೆಯಂ...
26. ಗಂಟೆ ಜಾಗಟೆಗಳ ಸದ್ದಿನಲಿ ಕರಗಿದ ಸನ್ನಿಪಾತ ಸಮೂಹವೇ....

ಆ. ಒಂದನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿರಿ. 3x1=3

27. ಸಂದು ಹೋದ ಜೀವನ ಶೈಲಿಯೊಂದರ ಮೆಲುಕು.
28. ರಸ್ತೆಯಿಂದ ಏಳುವ ಧೂಳು ನನ್ನ ತಲೆಗೆ ತಾಗಬೇಕು....

ಇ. ಒಂದನ್ನು ಕುರಿತು ಸಂದರ್ಭ ಸೂಚಿಸಿ ವಿವರಿಸಿರಿ. 3x1=3

29. ಇವನಿಗೇನು ಹೆಂಡತಿನೇ... ಮಕ್ಕಳೇ....
30. ರಾಜ ರಾಣಿಯರಿಂದ ಹಿಡಿದು ಎಲ್ಲಾರೂ ದುಡಿಯುತ್ತಾರೆ...

(ಪು.ತಿ.ನೋ.)

ಈ - ವಿಭಾಗ

IV ಅ. ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x3=12

31. ದ್ರೋಣನ ಕಳೇಬರವನ್ನು ಕಂಡು ದುರ್ಯೋಧನನು ಹೇಗೆ ದುಃಖಿಸುತ್ತಾನೆ?
32. ವಾಲ್ಮೀಕಿಯು ಸೀತೆಯನ್ನು ಹೇಗೆ ಸಂತೈಸುತ್ತಾನೆ?
33. ಜಲಪ್ರಳಯದ ಪರಿಣಾಮಗಳನ್ನು ಕವಿತೆಯ ಹಿನ್ನೆಲೆಯಲ್ಲಿ ಚರ್ಚಿಸಿರಿ.
34. ಉಳ್ಳವರ ಸ್ವಾರ್ಥ ಭೂಮಿ ಮತ್ತು ಇಂಧನವನ್ನು ಹೇಗೆ ನಾಶ ಗೈದಿದೆ?

ಆ. ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x2=8

35. ಮೊಮ್ಮಗನ ಪ್ರಾಣ ಉಳಿಸಿಕೊಳ್ಳಲು ಕರಿಸಿದ್ದೇಗೌಡ ಪಟ್ಟ ಪಾಡೇನು?
36. ಶಾಸ್ತ್ರೀ ಮಾಸ್ತರರ ವ್ಯಕ್ತಿತ್ವವನ್ನು ನಿರೂಪಿಸಿರಿ.
37. ಪಲಾಯನ ಮಾಡುತ್ತಿದ್ದ ಹುಲಿಯನ್ನು ನರಿಯು ಹೇಗೆ ಸಮಾಧಾನ ಪಡಿಸಿ ಹಿಂದಕ್ಕೆ ಕರೆ ತಂದಿತು?

ಇ. ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿರಿ. 4x2=8

38. ಬೋಳೇಶಂಕರನ ಅಣ್ಣಂದಿರೇ ವಾಸಿಯೆಂದು ಪಿಶಾಚಿ ಹೇಳಲು ಕಾರಣವೇನು?
39. ತನ್ನ ಕನಸುಗಳನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?
40. ಸೈನಿಕರು ಏನೇನನ್ನು ನಾಶ ಮಾಡಿದರು ಎಂದು ಶಿವಪುರದ ಜನ ಹೇಳುತ್ತಾರೆ?

ಉ - ವಿಭಾಗ

V ಅ. ಒಂದು ಪದ್ಯದ ಭಾವಾರ್ಥ ಬರೆಯಿರಿ. 5x1=5

41. ಅಸಮ ಬಲ ಭವದ್ವಿಕ್ರಮ
ಮಸಂಭವಂ ಪೆಱರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆನಭಿಮನ್ಯು ನಿಜಸಾ
ಹಸೈಕದೇಶಾನು ಮರಣಮೆಮಗಕ್ಕೆ ಗಡಾ

42. ಅಖಂಡ ಕರ್ನಾಟಕ:
ಅಲ್ಲೊ ನಮ್ಮ ನಾಲ್ಕು ದಿನದ ರಾಜಕೀಯ ನಾಟಕ!
ನೃಪತುಂಗನೆ ಚಕ್ರವರ್ತಿ
ಪಂಪನಲ್ಲಿ ಮುಖ್ಯಮಂತ್ರಿ....

ಆ. ಆರು ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿರಿ. 2x6=12

43. ಅರ್ಥ ಬರೆಯಿರಿ : ಪರಿಘು, ದರ್ಪಣ
44. ತತ್ಸಮ-ತದ್ಭವ ಬರೆಯಿರಿ : ವನ, ಮುಕ್ತಿ
45. ಬಿಡಿಸಿ ಬರೆಯಿರಿ : ಕಣ್ಣರಳಿಸು, ದಿಕ್ಸೂಚಿ
46. ವಿರುದ್ಧ ಪದಗಳನ್ನು ಬರೆಯಿರಿ : ಸುಖ, ಟೊಳ್ಳು
47. ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿರಿ
ಕಾಲಿಗೆ ಬುದ್ಧಿ ಹೇಳು; ತಲೆ ಎತ್ತು
48. ಯಾವುದಾದರೂ ಎರಡು ಅನ್ಯ ದೇಶ್ಯ ಪದಗಳನ್ನು ಬರೆಯಿರಿ.
49. ದ್ವಿರುಕ್ತಿಗೆ ಯಾವುದಾದರೂ ಎರಡು ಉದಾಹರಣೆ ಕೊಡಿರಿ.

ಇ. ಒಂದನ್ನು ಕುರಿತು ಪ್ರಬಂಧ ಬರೆಯಿರಿ. 5x1=5

50. ಹವ್ಯಾಸಗಳು
51. ಹಸಿರೇ ಉಸಿರು

ಈ. ಪತ್ರಲೇಖನ

52. ಕಾಲೇಜು ಅನುಭವವನ್ನು ಕುರಿತು ತಂದೆಗೆ ಪತ್ರ ಬರೆಯಿರಿ. 4x1=4

ಅಥವಾ

53. ನಿಮ್ಮೂರಿನ ವಿದ್ಯುತ್ ಸಮಸ್ಯೆಯ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಗೆ ಪತ್ರ ಬರೆಯಿರಿ.

ಉ. ಒಂದನ್ನು ವಿಸ್ತರಿಸಿ ಬರೆಯಿರಿ. 4x1=4

54. ಆಳಾಗಿ ದುಡಿ ಅರಸನಾಗಿ ತಿನ್ನು...
55. ಅಂಗೈ ಹುಣ್ಣಿಗೆ ಕನ್ನಡಿ ಬೇಕೆ...